**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ : ಕೇಂದ್ರ ಕಛೇರಿ : ಬೆಂಗಳೂರು**

Karnataka State Road Transport Corporation
Central Office, Bengaluru
Recruitment Section ( **ನೇಮಕ ಶಾಖೆ** )

ಸಂಖ್ಯೆ : ಕರಾಸಾ/ಕೇಕ/ನೇಮಕ/ಸಿ-2/369 / 2020-21 ದಿನಾಂಕ : 21-10-2020

ಸಾರ್ವಜನಿಕ ಸಂಪರ್ಕಾಧಿಕಾರಿ,
ಕ ರಾ ರ ಸಾ ನಿಗಮ,
ಕೇಂದ್ರ ಕಚೇರಿ,
ಬೆಂಗಳೂರು.
ಮಾನ್ಯರೇ,

ವಿಷಯ : ಪತ್ರಿಕೆಗಳಲ್ಲಿ ಪ್ರಕಟಣೆ ನೀಡುವ ಬಗ್ಗೆ.

ಉಲ್ಲೇಖ : 1) ಜಾಹೀರಾತು ಸಂ. 1/2018 ದಿನಾಂಕ : 17.3.2018,
ಜಾಹೀರಾತು ಸಂ. 2/2018 ದಿನಾಂಕ : 12.6.2018 ಮತ್ತು
ಜಾಹೀರಾತು ಸಂ. 1/2020 ದಿನಾಂಕ : 14.02.2020
2) ಸೂಕ್ತಾಧಿಕಾರಿಗಳ ಆದೇಶ ದಿನಾಂಕ : 14.10.2020

----------

ಕರಾರಸಾ ನಿಗಮದಲ್ಲಿ ಉಲ್ಲೇಖಿತ ಜಾಹೀರಾತುಗಳಡಿ ಪ್ರಾರಂಭಿಸಿದ್ದ ತಾಂತ್ರಿಕ ಸಹಾಯಕ, ಭದ್ರತಾ ರಕ್ಷಕ ಮತ್ತು ಚಾಲಕ, ಚಾಲಕ-ಕಂ-ನಿರ್ವಾಹಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಕೋವಿಡ್-19 ಹಿನ್ನಲೆಯಲ್ಲಿ ನಿರ್ದೇಶಕ ಮಂಡಳಿಯ ನಿರ್ಣಯದಂತೆ ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿರುತ್ತದೆ. ಸದರಿ ವಿಷಯವನ್ನು ಅಭ್ಯರ್ಥಿಗಳ ಹಾಗೂ ಸಾರ್ವಜನಿಕರ ಗಮನಕ್ಕೆ ತರಲು ಈ ಕೆಳಗಿನ ಪ್ರಕಟಣೆಯನ್ನು ರಾಜ್ಯಾದ್ಯಂತ ಪತ್ರಿಕಾ ಪ್ರಕಟಣೆಯಾಗಿ ಉಚಿತವಾಗಿ ಪ್ರಕಟಿಸಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಕೋರಲಾಗಿದೆ.

**ಪ್ರಕಟಣೆ**

"ಕರಾರಸಾ ನಿಗಮದಲ್ಲಿ ಜಾಹೀರಾತುಗೊಳಿಸಿರುವ ಜಾಹೀರಾತು ಸಂ.1/2018 ದಿನಾಂಕ : 17.03.2018 ರಂತೆ ತಾಂತ್ರಿಕ ಸಹಾಯಕ, ಜಾಹೀರಾತು ಸಂಖ್ಯೆ 2/2018 ದಿನಾಂಕ : 12.6.2018 ರಂತೆ ಭದ್ರತಾ ರಕ್ಷಕ ಮತ್ತು ಜಾಹೀರಾತು ಸಂಖ್ಯೆ 1/2020 ದಿನಾಂಕ : 14.02.2020 ರಂತೆ ಚಾಲಕ, ಚಾಲಕ-ಕಂ-ನಿರ್ವಾಹಕ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಕೋವಿಡ್-19 ಹಿನ್ನಲೆಯಲ್ಲಿ ಸಾರಿಗೆ ಕಾರ್ಯಾಚರಣೆ ವ್ಯತ್ಯಯ ಉಂಟಾಗಿರುವ ಕಾರಣ ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಲಾಗಿರುತ್ತದೆ, ನೇಮಕಾತಿ ಪ್ರಕ್ರಿಯೆ ಪ್ರಾರಂಭವಾದ ನಂತರ ಮಾಹಿತಿಯನ್ನು ನಿಗಮದ ವೆಬ್-ಸೈಟ್ ಆದ www.ksrtcjobs.karnataka.gov.in ನಲ್ಲಿ ಪ್ರಕಟಿಸಲಾಗುವುದು. ಹೆಚ್ಚಿನ ಮಾಹಿತಿ /ವಿವರಗಳಿಗೆ ಮೇಲಿನ ವೆಬ್-ಸೈಟ್‌ನ್ನು ವೀಕ್ಷಿಸುವುದು."

ತಮ್ಮ ವಿಶ್ವಾಸಿ

ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು ( ನೇಮಕ )